# ಕರ್ನಾಟಕ ಸರ್ಕಾರ

## (ತೋಟಗಾರಿಕೆ ಇಲಾಖೆ)

## ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜನ್ಸಿ (ರಿ)

ಸಂಖ್ಯೆ: ಮಿನಿ/ಕರಾತೋಮಿಏ/ವಿನಿ-1/02/2012-13

ಮಿಷನ್ ನಿರ್ದೇಶಕರ ಕಛೇರಿ
ಲಾಲ್‌ಬಾಗ್, ಬೆಂಗಳೂರು
ದಿನಾಂಕ: 29-05-2013

## ಪ್ರಕಟಣೆ

ವಿಷಯ: 2013-14ನೇ ಸಾಲಿಗೆ ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜನ್ಸಿ (ರಿ), ಕಛೇರಿಗೆ ಲೇಖನ ಸಾಮಗ್ರಿಗಳನ್ನು ಒದಗಿಸಲು ಟೆಂಡರ್ ಆಹ್ವಾನಿಸುವ ಬಗ್ಗೆ.

****

ಈ ಮೂಲಕ ನೋಂದಾಯಿತ ಸಂಸ್ಥೆಗಳಿಂದ, ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜನ್ಸಿ (ರಿ),ಲಾಲ್‌ಬಾಗ್, ಬೆಂಗಳೂರು ಕಛೇರಿಯ ಉಪಯೋಗಕ್ಕಾಗಿ ವಿವಿಧ ಮಾದರಿಯ ಲೇಖನ ಸಾಮಗ್ರಿಗಳನ್ನು ಒದಗಿಸಲು ಟೆಂಡರ್ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವವರು ರೂ.100/- ಗಳನ್ನು ಪಾವತಿಸಿ ದಿನಾಂಕ: 06.06.2013 ರಿಂದ ಟೆಂಡರ್ ದಾಖಲೆಗಳನ್ನು ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಮುಂದುವರೆದು, ತಾವು ಲೇಖನ ಸಾಮಗ್ರಿಗಳನ್ನು ಒದಗಿಸಲು ಇಷ್ಟಪಟ್ಟಲ್ಲಿ ತಾಂತ್ರಿಕ ಬಿಡ್ ಮತ್ತು ಐಟಂವಾರು ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕವಾಗಿ ಎರಡು ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಷರತ್ತುಗಳ ಮೇರೆಗೆ, ತಮ್ಮ ಅತೀ ಕಡಿಮೆ ದರವನ್ನು ನಮೂದಿಸಿ **ದಿನಾಂಕ: 20.06.2013, 4:00 P.M.** ರೊಳಗಾಗಿ ಮುಚ್ಚಿದ ಲಕೋಟೆಯಲ್ಲಿ KSHMA ಕಛೇರಿಯಲ್ಲಿ ಸಲ್ಲಿಸುವುದು. ಹಾಜರಿದ್ದವರ ಸಮ್ಮುಖದಲ್ಲಿ ಮುಚ್ಚಿದ ಲಕೋಟೆಯನ್ನು ದಿನಾಂಕ: 21.06.2013, 11:00 A.M. ರಂದು ತೆರೆದು ತಾಂತ್ರಿಕ ಬಿಡ್ ಪರಿಶೀಲಿಸಿದ ನಂತರ ಅರ್ಹ ಸಂಸ್ಥೆಯವರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಅನುಮೋದಿತ ದರಗಳು ಆದೇಶದ ದಿನಾಂಕದಿಂದ ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ KSHMA ಕಛೇರಿಯನ್ನು ಸಂಪರ್ಕಿಸಬಹುದು. ಪ್ರಕಟಣೆಯ ವಿವರಗಳನ್ನು ನಿರ್ದೇಶನಾಲಯದ Website www.hotriculture.kar.nic.in ನಲ್ಲಿ ಪಡೆಯಬಹುದು.

**KSHMA Office Tele Fax: 080 – 26577304. Mobile : ED : 9448999208, MD & DH : FAX-26578072 Off : 26571925**
**Email:KSHMA: nhm_karnataka@nic.in MD & DH: horticulturedirector@vsnl.net**
**Website: www.horticulture.kar.nic.in**

# <u>ಷರತ್ತು /ನಿಬಂದನೆಗಳು</u>

1. ಠೇವಣಿ ಮೊತ್ತ ರೂ.25,000/-ಗಳ DDಯನ್ನು ಮಿಷನ್ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ತಾಂತ್ರಿಕ ಬಿಡ್‌ನ ಜೊತೆಗೆ ಲಗತ್ತಿಸಬೇಕು ಇಲ್ಲವಾದಲ್ಲಿ ಸದರಿ ಟೆಂಡರ್ ಅನ್ನು ತಿರಸ್ಕರಿಸಲಾಗುವುದು.
2. E.M.D ಹಣಕ್ಕೆ ಯಾವುದೇ ವಿಧವಾದ ಬಡ್ಡಿಯನ್ನು ನೀಡಲಾಗುವುದಿಲ್ಲ. ಆಯ್ಕೆಯಾದ ಗುತ್ತಿಗೆದಾರರ EMD ಹಣವನ್ನು ಭದ್ರತಾ ಠೇವಣಿಯಾಗಿ ಪರಿವರ್ತಿಸಲಾಗುವುದು, ತೃಪ್ತಿಕರವಾಗಿ ಕೆಲಸ ನಿರ್ವಹಿಸಿದ ಬಳಿಕ ಗುತ್ತಿಗೆ ಅವಧಿ ಮುಗಿದ ನಂತರ ಅವರ ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು. ಮೇಲ್ಕಂಡ ಷರತ್ತು / ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲಿ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಟೆಂಡರು ಕರಾರನ್ನು ರದ್ದು ಪಡಿಸಲಾಗುವುದು.
3. ಗುತ್ತಿಗೆದಾರರ ಸಾಮರ್ಥ್ಯ ನಿರ್ಧರಿಸಲು ಈ ಹಿಂದೆ ಸರ್ಕಾರಿ ಅಥವಾ ಇತರೆ ಸಂಸ್ಥೆಗಳಲ್ಲಿ ಸರಬರಾಜು ಮಾಡಿದ ಯಾವುದಾದರೂ 2 agreement ಪ್ರತಿಯನ್ನು ತಾಂತ್ರಿಕ ಬಿಡ್‌ನೊಂದಿಗೆ ಲಗತ್ತಿಸಬೇಕು.
4. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಂಸ್ಥೆಯವರು ಆದಾಯ ತೆರಿಗೆ ಹಾಗೂ ಸೇವಾ ತೆರಿಗೆ ಇಲಾಖೆಯಲ್ಲಿ ನೊಂದಣಿ ಮಾಡಿಸಿದ್ದು ಕಡ್ಡಾಯವಾಗಿ TIN/ PAN ಸಂಖ್ಯೆ ಹೊಂದಿರಬೇಕು .
5. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಂಸ್ಥೆಯು ವಾಣಿಜ್ಯ ತೆರಿಗೆ ಇಲಾಖೆಯಿಂದ ನೊಂದಾಯಿತ ಸಂಸ್ಥೆಯಾಗಿರಬೇಕು.
6. ಅನುಮೋದಿತ ದರವು ಒಂದು ವರ್ಷದವರೆಗೆ ಚಾಲ್ತಿಯಲ್ಲಿದ್ದು ಮಧ್ಯಂತರದಲ್ಲಿ ದರವನ್ನು ಬದಲಾಯಿಸಲಾಗುವುದಿಲ್ಲ
7. ಸರಬರಾಜು ಆದೇಶವನ್ನು ನೀಡಿದ ನಂತರ ತಕ್ಷಣವೇ ಸರಬರಾಜು ಮಾಡುವುದು.
8. ಸರಬರಾಜು ಮಾಡಿದ ನಂತರ ಅದಕ್ಕೆ ಸಂಬಂಧಿಸಿದ ಸಾಲದ ಬಿಲ್ಲನ್ನು ಪಾವತಿಗಾಗಿ KSHMA ಕಛೇರಿಗೆ ನೀಡುವುದು.
9. ಸಾಲದ ಬಿಲ್ಲಿನ ಮೊತ್ತಕ್ಕೆ ನಿಯಮಾನುಸಾರ ಆದಾಯ ತೆರಿಗೆ ಕಟಾಯಿಸಲಾಗುವುದು.
10. ಕಛೇರಿಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಆದೇಶ ನೀಡಿದ ತಕ್ಷಣ ಒದಗಿಸದೆ ತೊಂದರೆ ಉಂಟಾಗುವ ಸಂದರ್ಭದಲ್ಲಿ ಯಾವುದೇ ಮಾಹಿತಿಯನ್ನು (Notice) ನೀಡದೆ, ಗುತ್ತಿಗೆ ಕರಾರನ್ನು ರದ್ದುಪಡಿಸುವ ಅಧಿಕಾರವು KSHMA ಕಛೇರಿಗೆ ಇರುತ್ತದೆ.
11. ಯಶಸ್ವಿ ಟೆಂಡರ್‌ದಾರರು ಈ ಎಲ್ಲಾ ಷರತ್ತುಗಳಿಗೊಳಪಟ್ಟ ಕರಾರು ಪತ್ರವನ್ನು ರೂ.100=00 ಛಾಪಾ ಕಾಗದದಲ್ಲಿ ಬರೆದುಕೊಡಬೇಕು.
12. ಸದರಿ ಟೆಂಡರನ್ನು ಅಂಗೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರ ಮಿಷನ್ ನಿರ್ದೇಶಕರು/ ತೋಟಗಾರಿಕೆ ನಿರ್ದೇಶಕರ/ ಕೆಳಸಹಿದಾರರಿಗೆ ಇರುತ್ತದೆ

**ಕಾರ್ಯನಿರ್ವಾಹಕ ನಿರ್ದೇಶಕರು**

## ಅನುಬಂಧ - 1

## ತಾಂತ್ರಿಕ ಬಿಡ್ಡು

## ಟೆಂಡರ್‌ನ ವಿವರಗಳು :

| | | |
|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ<br>ದೂರವಾಣಿ ಸಂಖ್ಯೆ<br>ಈ-ಮೇಲ್ ವಿಳಾಸ | |
| 2 | ಸಂಸ್ಥೆಯ ನೊಂದಣಿ ಸಂಖ್ಯೆ ಮತ್ತು ದಿನಾಂಕ | |
| 3 | ನಿಗಮ/ ಸಂಸ್ಥೆ ಆಗಿದ್ದರೆ ಮುಖ್ಯಸ್ಥರ ಹುದ್ದೆ ಹೆಸರು ಮತ್ತು ವಿಳಾಸ | |
| 4 | ಸಂಸ್ಥೆಯು ಮಾಲಿಕತ್ವವಾಗಿದ್ದರೆ ಮಾಲಿಕರ ಹೆಸರು ಮತ್ತು ವಿಳಾಸ | |
| 5 | ಸಂಸ್ಥೆಯು ಪಾಲುದಾರಿಕೆಯಾಗಿದ್ದರೆ ಪಾಲುದಾರರ ಹೆಸರು ಮತ್ತು ವಿಳಾಸ | |
| 6 | TIN/PAN ಮತ್ತು ಸೇವಾ ತೆರಿಗೆ ನೊಂದಣಿ ವಿವರ (ಜರಾಕ್ಸ್ ಪ್ರತಿ ಲಗತ್ತಿಸುವುದು) | |
| 7 | 2010-11, 2011-12, 2012-13 ನೇ ಸಾಲಿನ ತೆರಿಗೆ ಸಲ್ಲಿಕೆ ಬಗ್ಗೆ ಮಾಹಿತಿ (ನಕಲು ಪ್ರತಿ ಲಗತ್ತಿಸುವುದು) | |
| 8 | EMD ಮೊತ್ತದ ವಿವರ (ಸಂಖ್ಯೆ,ದಿನಾಂಕ,ಮೊತ್ತ) | |
| 9 | ಕಳೆದ ಎರಡು ವರ್ಷಗಳಲ್ಲಿ ಸರ್ಕಾರಿ ಅಥವಾ ಇತರೆ ಇಲಾಖೆಗಳಿಗೆ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಬಗ್ಗೆ ಮಾಹಿತಿ /ದಾಖಲಾತಿಗಳನ್ನು ಒದಗಿಸುವುದು. (ನಕಲು ಪ್ರತಿ ಲಗತ್ತಿಸುವುದು) | |

**ಟೆಂಡರ್ ದಾರರ ಸಹಿ**

# ಅನುಬಂಧ - 2

## ಆರ್ಥಿಕ ಬಿಡ್

## Stationery Details

| Sl. No | Particulars of Stationery | Unit | Rate Per unit | |
|---|---|---|---|---|
| | | | In figures | In words |
| | CARTRIDGE | | | |
| 1 | HP C 9730 A BLACK | 1 NO | | |
| 2 | HP C 9731 A CYAN/CIAN | 1 NO | | |
| 3 | HP C 9732 A YELLOW | 1 NO | | |
| 4 | HP C 9733 A MAGENTA | 1 NO | | |
| 5 | HP INK C 4936 A BLACK | 1 NO | | |
| 6 | HP INK C 4937 A CYAN/CIAN | 1 NO | | |
| 7 | HP INK C 4938 A MAGENTA | 1 NO | | |
| 8 | HP INK C 4939 A YELLOW | 1 NO | | |
| 9 | HP C 8543 X | 1 NO | | |
| 10 | HP Q 7553 A | 1 NO | | |
| 11 | SAMSUNG MLT D-108 S | 1 NO | | |
| 12 | HP Q 2612 A | 1 NO | | |
| | TONER | | | |
| 13 | CANON NPG 51 TONER | 1 NO | | |
| 14 | KX FA 93 A TTR ROLLER | 1 NO | | |
| 15 | WORK CENTRE 5020 TONER | 1 BOX | | |
| 16 | WORK CENTRE 5225 TONER | 1 BOX | | |
| | XEROX PAPER | | | |
| 17 | JK COPEAR A-4 SIZE | 1 Ream | | |
| 18 | JK COPEAR A-3 SIZE | 1 Ream | | |

| | | | | |
|---|---|---|---|---|
| | OTHERS | | | |
| 19 | SKETCH PENS (12 PIECES) | 1 PACK | | |
| 20 | NOTE STICKERS (3 COLORS x 12 COVERS) | 1 BOX | | |
| 21 | PENCILS (10 PIECES) | 1 BOX | | |
| 22 | UNREMOVEABLE MARKER PENS | 1 NO | | |
| 23 | SOLO PLASTIC FOLDERS (10 NO.) | 1 COVER | | |
| 24 | TAGS (20 SMALL BUNDEL = 1 BUNDEL) | 1 BUNDEL | | |
| 25 | SELO TAPE | 1 NO | | |
| 26 | STAPPLER PINS (20 SMALL BOX = 1 BOX) | 1 BOX | | |
| 27 | GLUE STICK (20 NO = 1 BOX) | 1 BOX | | |
| 28 | HIGHLIGHTER PENS | 1 NO | | |
| 29 | GUM BOTTLE (1 LITER) | 1 BOTTLE | | |
| 30 | INK PAD | 1 NO | | |

ಟೆಂಡರ್ ದಾರರ ಸಹಿ